ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಓದಲಾಗಿದೆ:**

1. ದಿನಾಂಕ: 02.12.2020 ರಂದು ಅನುಚ್ಛೇದ 371(ಜೆ) ಅಡಿಯಲ್ಲಿ ಖಾಲಿ ಇರುವ ಹುದ್ದೆಗಳನು ಭರ್ತಿ ಮಾಡುವ ಕುರಿತು ವಿಡಿಯೋ ಸಂವಾದ ಮೂಲಕ ನಡೆದ ಸಭೆಯ ನಡವಳಿ.
2. ನಿಗಮದ ನಡವಳಿ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16/5, ದಿನಾಂಕ: 04.12.2020.

**ಪ್ರಸ್ತಾವನೆ:**

ಸಂವಿಧಾನ ಅನುಚ್ಛೇದ 371(ಜೆ) ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ನೇರ ನೇಮಕಾತಿ ಮತ್ತು ಪದೋನ್ನತಿಯಲ್ಲಿ ಮೀಸಲಿರಿಸಿದ ಹುದ್ದೆಗಳನ್ನು ಭರ್ತಿ ಮಾಡುವ ವಿಷಯದಲ್ಲಿ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಪರಿಶೀಲಿಸಿ, ಪ್ರತಿ ಮಾಹೆಯಲ್ಲಿ ನಡೆಯುವ ಕೆ.ಡಿ.ಪಿ. ಸಭೆಯಲ್ಲಿ ಅನುಚ್ಛೇದ 371(ಜೆ) ರ ಅನುಷ್ಠಾನವನ್ನು ಪ್ರಮುಖ ವಿಷಯವನ್ನಾಗಿ ಚರ್ಚಿಸುತ್ತಿದೆ.

ದಿನಾಂಕ: 02.12.2020 ರಂದು ನಡೆದ ಸಭೆಯಲ್ಲಿ, ಮುಂದಿನ ಕೆ.ಡಿ.ಪಿ ಸಭೆಯು ನಿಗದಿಯಾಗುವ ಒಳಗಾಗಿ ಕವಿಪ್ರನಿನಿ ಮತ್ತು ಜೆಸ್ಕಾಂನ ಸಂಬಂಧಪಟ್ಟ ಅಧಿಕಾರಿಗಳು ಚರ್ಚಿಸಿ, ನಿರ್ದಿಷ್ಟ ಹಾಗೂ ಸ್ಪಷ್ಟವಾದ ಅನುಚ್ಛೇದ 371(ಜೆ) ಗೆ ಸಂಬಂಧಿಸಿದ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳ ವಿವರಗಳನ್ನು ಒದಗಿಸಲು ಸೂಚಿಸಲಾಗಿರುತ್ತದೆ.

ಕವಿಪ್ರನಿನಿಯಲ್ಲಿ ಅನುಚ್ಛೇದ 371(ಜೆ) ರ ಅನುಷ್ಠಾನದ ಹಿನ್ನಲೆಯಲ್ಲಿ ರಾಜ್ಯವ್ಯಾಪಿ ಸ್ಥಳೀಯ ವೃಂದದ ಹುದ್ದೆಗಳ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ, ಸಹಾಯಕ ಇಂಜಿನಿಯರ್(ಪದವೀಧರ) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಪದವೀಧರ) ಹುದ್ದೆಗಳಿಗೆ ದಿನಾಂಕ: 26.11.2020 ರ ಅಧಿಸೂಚನೆಯನ್ವಯ ಪದೋನ್ನತಿ ನೀಡಲಾಗಿರುತ್ತದೆ.

ಆದರೆ, 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ ಪದೋನ್ನತಿ ನೀಡುವ ಪ್ರಕ್ರಿಯೆಯು ಬಹಳಷ್ಟು ದಿನಗಳಿಂದ ಬಾಕಿ ಇದ್ದು, ಈ ಬಗ್ಗೆ ದಿನಾಂಕ: 04.12.2020 ರಂದು ನಿಗಮ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಸದರಿ ಸಭೆಯಲ್ಲಿ ಕವಿಪ್ರನಿನಿಯ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳ ಜ್ಯೇಷ್ಠತಾ ಪಟ್ಟಿಗಳನ್ನು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಿರ್ವಹಿಸುತ್ತಿರುವುದರಿಂದ, ಸದರಿ ಅಧಿಕಾರವನ್ನು ಕವಿಪ್ರನಿನಿಗೆ ಪ್ರತ್ಯಾಯೋಜಿಸುವಂತೆ ಕೋರಲಾಯಿತು.

ಹಾಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ, 'ಸಿ' ಮತ್ತು 'ಡಿ' ಗುಂಪಿನ ಹುದ್ದೆ ಮತ್ತು ನಿರ್ವಹಣಾ ಸಿಬ್ಬಂದಿ ಹುದ್ದೆಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯ ಮತ್ತು ಪಾಲನಾ ವಲಯಗಳ ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತಗಳ ಅಧೀಕ್ಷಕ ಇಂಜಿನಿಯರ್(ವಿ) ಮತ್ತು ಕಾರ್ಯ ಮತ್ತು ಪಾಲನಾ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರುಗಳು ನೇಮಕಾತಿ ಮತ್ತು ಪದೋನ್ನತಿ ಪ್ರಾಧಿಕಾರಿಗಳಾಗಿದ್ದು, ವಿವರವು ಈ ಕೆಳಕಂಡಂತಿದೆ:

| ಕ್ರ. ಸಂ. | ಪದವೃಂದ | ಹಾಲಿ ನೇಮಕಾತಿ/ಬಡ್ತಿ ಪ್ರಾಧಿಕಾರ |
|---|---|---|
| 1. | <u>ಹಾಟ್‌ಲೈನ್ ಸಮೂಹ:</u><br>ಅರ್ಹತಾ ದರ್ಜೆ ಮೆಕ್ಯಾನಿಕ್ (ಹಾಟ್‌ಲೈನ್), ಹಾಟ್ ಲೈನ್ ಮೆಕ್ಯಾನಿಕ್ ದರ್ಜೆ-1, ಹಿರಿಯ ಮೆಕ್ಯಾನಿಕ್, ಹಾಟ್ ಲೈನ್ ಮೆಕ್ಯಾನಿಕ್ ದರ್ಜೆ-2, ಲೈನ್ ಮೆಕ್ಯಾನಿಕ್ ದರ್ಜೆ-1<br>**<u>ದೂರ ಸಂಪರ್ಕ ಸಮೂಹ:</u>**<br>ಹಿರಿಯ ಮೆಕ್ಯಾನಿಕ್ (ದೂ.ಸಂ.), ಮೆಕ್ಯಾನಿಕ್ ದರ್ಜೆ-1(ದೂ.ಸಂ.) | ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ |
| 2. | ಇತರೆ 'ಸಿ' ಮತ್ತು 'ಡಿ' ಮತ್ತು ನಿರ್ವಹಣಾ ಪದವೃಂದದ ಸಮೂಹಗಳ ಹುದ್ದೆಗಳು | ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ.<br>ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ. |

ಸದರಿ ವಿಷಯದ ಬಗ್ಗೆ ಪರಿಶೀಲಿಸಿ, ಕಲ್ಯಾಣ-ಕರ್ನಾಟಕ ಪ್ರದೇಶದ ಮೀಸಲಾತಿಯಡಿಯಲ್ಲಿ ಜೇಷ್ಟತಾ ಪಟ್ಟಿ ತಯಾರಿಸಿ ಪ್ರಕಟಿಸಲು, ನಿರ್ವಹಿಸಲು ಮತ್ತು ಪದೋನ್ನತಿಗಳನ್ನು ಜಾರಿಗೊಳಿಸುವ ಅಧಿಕಾರಗಳನ್ನು ಕವಿಪ್ರನಿನಿಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಯಿತು. ಅದರಂತೆ, ಈ ಕೆಳಕಂಡ ಆದೇಶ:

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ5ಎ/18314/2015-16/10, ದಿನಾಂಕ: 22 DEC 2020**

ಕವಿಪ್ರನಿನಿಯ ಕಲ್ಯಾಣ ಕರ್ನಾಟಕ ಮೀಸಲಾತಿ ಆದೇಶ-2013 ರ ಅನ್ವಯ ಕವಿಪ್ರನಿನಿಯ ಕಚೇರಿಗಳಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಐಚ್ಛಿಕ ಪತ್ರಗಳನ್ನು ನೀಡಿರುವ ಅರ್ಹ ನೌಕರರು ಮತ್ತು ಕವಿಪ್ರನಿನಿ ವ್ಯಾಪ್ತಿಯ ಕಲ್ಯಾಣ-ಕರ್ನಾಟಕ ಪ್ರದೇಶದ ಮೀಸಲಾತಿಯಡಿಯಲ್ಲಿ, ಕವಿಪ್ರನಿನಿಯಿಂದ ನೇರ ನೇಮಕಾತಿ ಹೊಂದಿದ 'ಸಿ' ಮತ್ತು 'ಡಿ' ಗುಂಪಿನ ಹುದ್ದೆ ಮತ್ತು ನಿರ್ವಹಣಾ ಸಿಬ್ಬಂದಿ ಹುದ್ದೆಗಳ ನೌಕರರ ಜೇಷ್ಟತಾ ಪಟ್ಟಿ ತಯಾರಿಕೆ, ನಿರ್ವಹಣೆ ಮತ್ತು ಪದೋನ್ನತಿ ಜಾರಿಗೊಳಿಸಲು ಈ ಕೆಳಕಂಡಂತೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ:

| ಕ್ರ. ಸಂ. | ಪದವೃಂದ | ನೇಮಕಾತಿ/ಬಡ್ತಿ ಪ್ರಾಧಿಕಾರ |
|---|---|---|
| 1. | <u>ಹಾಟ್‌ಲೈನ್ ಸಮೂಹ:</u><br>ಅರ್ಹತಾ ದರ್ಜೆ ಮೆಕ್ಯಾನಿಕ್ (ಹಾಟ್‌ಲೈನ್), ಹಾಟ್ ಲೈನ್ ಮೆಕ್ಯಾನಿಕ್ ದರ್ಜೆ-1, ಹಿರಿಯ ಮೆಕ್ಯಾನಿಕ್, ಹಾಟ್ ಲೈನ್ ಮೆಕ್ಯಾನಿಕ್ ದರ್ಜೆ-2, ಲೈನ್ ಮೆಕ್ಯಾನಿಕ್ ದರ್ಜೆ-1<br>**<u>ದೂರ ಸಂಪರ್ಕ ಸಮೂಹ:</u>**<br>ಹಿರಿಯ ಮೆಕ್ಯಾನಿಕ್ (ದೂ.ಸಂ.), ಮೆಕ್ಯಾನಿಕ್ ದರ್ಜೆ-1(ದೂ.ಸಂ.) | ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ |
| 2. | ಇತರೆ 'ಸಿ' ಮತ್ತು 'ಡಿ' ಮತ್ತು ನಿರ್ವಹಣಾ ಪದವೃಂದದ ಇತರೆ ಸಮೂಹಗಳ ಹುದ್ದೆಗಳು | ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ)<br>ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಟಿ.ಎಲ್ ಮತ್ತು ಎಸ್.ಎಸ್. ವಿಭಾಗ |

ಇನ್ನುಳಿದಂತೆ ಚಾಲ್ತಿಯಲ್ಲಿರುವ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳಿಗೆ ಯಾವುದೇ ಬದಲಾವಣೆಗಳಿರುವುದಿಲ್ಲ.

"<u>ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ</u>."

ನಿರ್ದೇಶಕರು
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

<u>ಗೆ:</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.

3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/eprasarana for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.